ಇ) ಇಲ್ಲ.

ಬೆಂಗಳೂರು ನಗರದ ನಿವೇಶನ ರಹಿತರು ನಿವೇಶನಕ್ಕಾಗಿ ನಗರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ.

354 (402) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ನಿವೇಶನ ರಹಿತರು ನಿವೇಶನಕ್ಕಾಗಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಉ) 86,988

ಬಾರ್ ಮತ್ತು ರೊಸ್ಟೋರೆಂಟ್‌ಅನ್ನು ತೆರೆಯಲು ಅನುಮತಿ ನಿರಾಕರಿಸುವುದರ ಬಗ್ಗೆ

356 (700) ಶ್ರೀ ಎಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ, ಚೋಳನಾಯಕನ ಹಳ್ಳಿಯ ಅಯ್ಯಪ್ಪ ದೇವಸ್ಥಾನ ಹರಿಜನ ಕಾಲೋನಿಯಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್ ನಡೆಸಲು ಲೈಸನ್ಸ್ ನೀಡದಾಗ್ಯೂ ಬೆಂಗಳೂರು ಜಿಲ್ಲಾಧಿಕಾರಿಗಳು ಪರವಾನಗಿ ನೀಡಿರುವುದು ನಿಜವೇ?

ಆ) ಈ ವಿಷಯಲ್ಲಿ ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ದೂರುಗಳನ್ನು ಸಲ್ಲಿಸಿರುವರೇ?

ಇ) ಹಾಗಿದ್ದಲ್ಲಿ, ದೂರಿನ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಮೇಲ್ಕಂಡ ಸ್ಥಳದಲ್ಲಿ ಬಾರ್, ವೈನ್ ಷಾಪ್ ಮುಂತಾದವುಗಳನ್ನು ತೆರೆಯದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು.):-

ಅ) ಇಲ್ಲ.

ಆ) ಹೌದು.

ಇ) ಈ ಬಗ್ಗೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಈ) ಆಕ್ಷೇಪಣಾ ಸ್ಥಳವಾದ ಪಕ್ಷದಲ್ಲಿ ಪರವಾನಗಿ ಮಂಜೂರು ಮಾಡದಿರಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೆ.ಆರ್. ನಗರ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜೂರಾತಿ.

357 (933) ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

1. ಕೃಷ್ಣರಾಜ ನಗರ ಟೌನ್‌ಗೆ ಒಳಚರಂಡಿ ಯೋಜನೆಯ ಮಂಜೂರಾತಿಗಾಗಿ ನಕ್ಷೆ, ಅಂದಾಜು ವೆಚ್ಚ ತಯಾರಿಸಲಾಗಿದೆಯೇ?

2. ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚದ ನಕ್ಷೆಯೇನು?

3. ಈ ಬಾರಿಯೇ ಆ ಯೋಜನೆಗೆ ಮಂಜೂರಾತಿ ಕೊಟ್ಟು ಕಾರ್ಯಾರಂಭಿಸಲು ಸರ್ಕಾರವು ಅನುವು ಮಾಡುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1) ಹೌದು.

2) ರೂ.148.00 ಲಕ್ಷಗಳು

3) ಈ ಪ್ರಸ್ತಾವನೆಯನ್ನು ನಿಯಮಗಳನುಸಾರವಾಗಿ ಪರಿಶೀಲಿಸಲಾಗುವುದು.

ಹುಸಗುಂದ ತಾಲ್ಲೂಕು ಕಮ್ಮತ್ತಿ ಗ್ರಾಮಕ್ಕೆ ಪೋಲೀಸ್ ಔಟ್‌ಪೋಸ್ಟ್.

358 (771) ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಸಗುಂದ ತಾಲ್ಲೂಕು ಕಮ್ಮತ್ತಿ ಗ್ರಾಮಕ್ಕೆ ಒಂದು ಪೋಲೀಸ್ ಔಟ್ ಪೋಸ್ಟ್ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಗ್ರಾಮಕ್ಕೆ ಪೋಲೀಸ್ ಔಟ್ ಪೋಸ್ಟ್ ತೆರೆಯುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ವತಿಯಿಂದ ಬೀದರ್‌ಗೆ ಮಂಜೂರಾದ ಹಣ.

361 (550) ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ):- ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1991-92ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ಹಣದ ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

2. ಯಾವ, ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು):-

1) ಹೈದ್ರಾಬಾದ್ - ಕರ್ನಾಟಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹಣವನ್ನು ಜಿಲ್ಲಾ ಆಧಾರವಾ ತಾಲ್ಲೂಕುವಾರು ಬಿಡುಗಡೆ ಮಾಡುವ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಕಾರ್ಯಕ್ರಮಗಳಿಗೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ.

2) ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತೆ ಕಾಮಗಾರಿಗಳಿಗೆ 1991-92ನೇ ಸಾಲಿನಲ್ಲಿ ದಿನಾಂಕ 15-2-1992ರ ವರೆಗೆ 519.38 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.